ಬೆಂ.ಗ್ರಾಮಾಂತರ ಲೋಕಲ್ ಎಕ್ಸ್‌ಪ್ರೆಸ್



ವಿಜಯವಾಣಿ ಚಿತ್ರ

ಕಟ್ಟಡ ಉದ್ಘಾಟನೆ

ದೇವನಹಳ್ಳಿ ತಾಲೂಕಿನ ಚಿಕ್ಕಮರಳಿ ಹಾಲು ಉತ್ಪಾದಕರ ಸಹಕಾರ ಸಂಘದ ಮೊದಲನೇ ಅಂತಸ್ತಿನ ಕಟ್ಟಡವನ್ನು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ.ಎಚ್. ಮುನಿಯಪ್ಪ ಸೋಮವಾರ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ವಿ.ಕೃಷ್ಣಪ್ಪ, ಸಹಕಾರ ಹಾಲು ಒಕ್ಕೂಟದ ಅಧ್ಯಕ್ಷ ಎಚ್.ಪಿ.ರಾಜ್ ಕುಮಾರ್ ಮತ್ತಿತರರು ಇದ್ದರು.

ಸುದ್ದಿ ಕಾರ್ನರ್

ಕೃಷಿಭಾಗ್ಯ ಯೋಜನೆಯಡಿ ರೈತರಿಂದ ಅರ್ಜಿ

ದೊಡ್ಡಬಳ್ಳಾಪುರ: ಪ್ರಸಕ್ತ ಸಾಲಿನಲ್ಲಿ ಕೃಷಿಭಾಗ್ಯ ಯೋಜನೆಯಡಿ ಬೆಳೆಗಳಲ್ಲಿ ಮಣ್ಣು, ನೀರು ಸಂರಕ್ಷಣೆ ಹಾಗೂ ನೀರಿನ ಸಮರ್ಥ ಬಳಕೆಯನ್ನು ಉತ್ತೇಜಿಸುವ ಸಲುವಾಗಿ ಕೃಷಿ ಇಲಾಖೆಯಿಂದ ಕೃಷಿ ಹೊಂಡ ಮತ್ತು ಇತರೆ ಘಟಕಗಳ ನಿರ್ಮಾಣಕ್ಕಾಗಿ ಸಾಮಾನ್ಯ ರೈತರಿಗೆ ಶೇ.80 ಸಹಾಯಧನ ಹಾಗು ಪ.ಜಾತಿ, ಪಂಗಡದವರಿಗೆ ಶೇ.90 ಸಹಾಯಧನ ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ. ರೈತರು ಪ್ರಕಟಣೆ ದಿನದಿಂದ ಹಿಡಿದು ಒಂದು ವಾರದೊಳಗೆ ಪಹಣಿ, ಆಧಾರ್‌ಕಾರ್ಡ್, ಬ್ಯಾಂಕ್ ಪಾಸ್‌ಪುಸ್ತಕ, ಫೊಟೋ ಹಾಗೂ ಜಾತಿ ಪ್ರಮಾಣ ಪತ್ರ (ಪ.ಜಾತಿ ಮತ್ತು ಪಂಗಡದವರು ಮಾತ್ರ) ಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ, ಸಮೀಪದ ರೈತ ಸಂಪರ್ಕ ಕೇಂದ್ರಗಳಲ್ಲಿ ಸಲ್ಲಿಸಿದರೆ ಜೇಷ್ಠತೆ ಆಧಾರದ ಮೇಲೆ ಸಹಾಯಧನ ನೀಡಲಾಗುತ್ತದೆ. ಕೃಷಿಭಾಗ್ಯ ಯೋಜನೆಯ ಪ್ಯಾಕೇಜ್ ಮಾದರಿಯಲ್ಲಿದ್ದು, ಕ್ಷೇತ್ರ ಬದು, ಕೃಷಿ ಹೊಂಡ, ಪಾಲೀಥೀನ್ ಹೊದಿಕೆ, ಡೀಸೆಲ್/ಪೆಟ್ರೋಲ್ ಪಂಪ್ ಸೆಂಟ್/ ಸೋಲಾರ್ ಪಂಪ್‌ಸೆಟ್, ಲಘು ನೀರಾವರಿ ಘಟಕ ಹಾಗೂ ತಂತಿ ಬೇಲಿ ಒಳಗೊಂಡಿರುತ್ತದೆ. ಅರ್ಜಿದಾರರು ಕಡ್ಡಾಯವಾಗಿ ಎಲ್ಲ ಘಟಕಗಳ ಅನುಷ್ಠಾನ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ, ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕಿ ಡಿ.ರಾಜೇಶ್ವರಿ ತಿಳಿಸಿದ್ದಾರೆ.

ವಿಜಯಪುರ ರೇಷ್ಮೆ ಮಾರುಕಟ್ಟೆ ಧಾರಣೆ

ಗರಿಷ್ಠ	ಕನಿಷ್ಠ	ಸರಾಸರಿ
₹492	₹288	₹422

ಶ್ರೀ ಆಂಜನೇಯ ಸ್ವಾಮಿ ಜ್ಯೋತಿಶಾಲಯ

ಸುಖ ಜೀವನಕ್ಕೆ ಶಾಶ್ವತ ಪರಿಹಾರ

ನಿಮ್ಮ ಕೌಟುಂಬಿಕ ಸಮಸ್ಯೆಗಳಾದ
ಸ್ತ್ರೀ–ಪುರುಷ ಪ್ರೇಮ ವಿಚಾರ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಗಂಡ–ಹೆಂಡತಿ ಕಿರಿಕಿರಿ, ಸಂತಾನ ಸಮಸ್ಯೆ, ಮದುವೆಯಲ್ಲಿ ವಿಳಂಬ, ಅತ್ತೆ–ಸೊಸೆ ಕಿರಿಕಿರಿ, ಡೈವೋರ್ಸ್ ಪ್ರಾಬ್ಲಂ, ಮಾಟ–ಮಂತ್ರ, ಸಿನಿಮಾ ರಂಗ, ರಾಜಕೀಯ, ಉದ್ಯೋಗ, ಹಣಕಾಸಿನ ಸಮಸ್ಯೆ ಹಾಗೂ ಇನ್ನೂ ನಿಮ್ಮ ಯಾವುದೇ ಗುಪ್ತ, ಕಠಿಣ ಸಮಸ್ಯೆಗಳಿದ್ದರೂ ಕೇರಳ ಹಾಗೂ ಕೊಳ್ಳೇಗಾಲದ ರುಂಡಮಾಲಿನಿ ಪೂಜಾ ಶಕ್ತಿಯಿಂದ 5 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡಲಾಗುತ್ತದೆ.
ಪಂಡಿತ್ ಸುರೇಶ್ ಭಟ್ ಫೋನಿನ ಮೂಲಕ ಪರಿಹಾರ ತಿಳಿಸುತ್ತಾರೆ.
ಸಂಪರ್ಕಿಸಿ : 99003 05071
ನೀವು ಹಲವಾರು ಜ್ಯೋತಿಷ್ಯರಲ್ಲಿ ಕೇಳಿ ಹಣ ನೆಮ್ಮದಿ ವಿಶ್ವಾಸ ಕಳೆದುಕೊಂಡಿದ್ದೀರಾ ? ಚಿಂತಿಸಬೇಡಿ ನಮ್ಮ ಸರಿಯಾದ ವಿಳಾಸಕ್ಕೆ ಇಂದೇ ಭೇಟಿ ಕೊಡಿ !
ಖಾಯಂ ಆಫೀಸ್ ವಿಳಾಸ : ಸಾಯಿ ಗೋಲ್ಡ್ ಪ್ಯಾಲೇಸ್ ಹಿಂಭಾಗ, ಪೋಸ್ಟ್ ಆಫೀಸ್ ಎದುರುಗಡೆ, ಯಲಹಂಕ ಓಲ್ಡ್ ಟೌನ್, ಬೆಂಗಳೂರು–64

ಫಾರಂ ಜಿ

ಫ್ಯೂಚರ್ ಎಂಟರ್‌ಪ್ರೈಸಸ್ ಅಮಿಟೆಡ್‌ನಲ್ಲಿ ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ ಆಹ್ವಾನ

ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಜವಳಿ ತಯಾರಿಕೆಯಲ್ಲಿ, ಹೂಡಿಕೆ ಚಟುವಟಿಕೆಗಳು ಮತ್ತು ಭಾರತದ್ಯಾಂತ ರಿಟೇಲ್ ಸ್ಟೋರ್ ಮೂಲಸೌಕರ್ಯಗಳನ್ನು ಭೋಗ್ಯಕ್ಕೆ ನೀಡುವ ಕೆಲಸದಲ್ಲಿ ತೊಡಗಿಕೊಂಡಿದೆ.

(ದಿವಾಳಿತನ ಮತ್ತು ಪರಿಹಾರ ಆಸಾಧ್ಯ ಭಾರತೀಯ ಮಂಡಳಿ (ಕಾರ್ಪೋರೇಟ್ ವ್ಯಕ್ತಿಗಳ ದಿವಾಳಿತನ ಪರಿಹಾರ ಪ್ರಕ್ರಿಯೆ) ನಿಯಂತ್ರಣಗಳು, 2016ರ ನಿಯಂತ್ರಣ 36ಎನ ಉಪನಿಯಂತ್ರಣ (1)ರನ್ವಯ)

ಕ್ರ.ಸಂ.	ಸಂಬಂಧಪಟ್ಟ ವಿವರಗಳು	
1	ಪಾನ್ ಮತ್ತು ಸಿಐಎನ್ ಸಂ. ಸಹಿತ ಕಾರ್ಪೋರೇಟ್ ಸಾಲಗಾರರ ಹೆಸರು	**ಫ್ಯೂಚರ್ ಎಂಟರ್‌ಪ್ರೈಸಸ್ ಅಮಿಟೆಡ್** ಪಾನ್: AACP6317L CIN: L52399MH1987PLC044954
2	ನೋಂದಾಯಿತ ಕಚೇರಿಯ ವಿಳಾಸ	ನಾಲೆಡ್ಜ್ ಹೌಸ್, ಶ್ಯಾಂ ನಗರ, ಜೋಗೇಶ್ವರಿ-ವಿಖ್ರೋಲಿ ಲಿಂಕ್ ರಸ್ತೆಯಿಂದ ಆಚೆ, ಜೋಗೇಶ್ವರಿ (ಪೂರ್ವ), ಮುಂಬೈ-400 060
3	ಜಾಲತಾಣದ ಯುಆರ್‌ಎಲ್	www.felindia.in
4	ಸ್ಥಿರಾಸ್ತಿಗಳು ಹೆಚ್ಚಾಗಿ ಕೇಂದ್ರೀಕೃತವಾಗಿರುವ ಸ್ಥಳಗಳ ವಿವರ	ಮಹಾರಾಷ್ಟ್ರ ಮತ್ತು ಕರ್ನಾಟಕ
5	ಮುಖ್ಯ ಉತ್ಪನ್ನಗಳು/ಸೇವೆಗಳ ಸಂಸ್ಥಾಪಿತ ಸಾಮರ್ಥ್ಯ ಸಿದ್ಧ ಉಡುಪುಗಳ ತಯಾರಿಕೆ:-	(ಎ) ಪ್ಯಾಂಟ್‌ಗಳು - 70,000 ಪೀಸ್‌ಗಳು/ಪ್ರತಿ ತಿಂಗಳು (ಬಿ) ಶರ್ಟ್‌ಗಳು - 60,000 ಪೀಸ್‌ಗಳು/ಪ್ರತಿ ತಿಂಗಳು ನಿಮಿ ವಹಿವಾಟು ಸೇರಿದಂತೆ ಇತರೆ ವಹಿವಾಟುಗಳಲ್ಲಿ ಮಾಡಿರುವ ಹೂಡಿಕೆಗಳು.
6	ಕಳೆದ ವಿತ್ತೀಯ ವರ್ಷದಲ್ಲಿ ಮಾಡಾಟವಾಗಿರುವ ಮುಖ್ಯ ಉತ್ಪನ್ನಗಳು/ಸೇವೆಗಳ ಪ್ರಮಾಣ ಮತ್ತು ಮೌಲ್ಯ ವಿತ್ತೀಯ ವರ್ಷ	2022-23ರ ಆರ್ಥಿಕ ವಿವರಗಳ ಪ್ರಕಾರ, ಎಲ್ಲ ಕಾರ್ಯಾಚರಣೆಗಳಿಂದ ಒಟ್ಟು ಆದಾಯ ರೂ.104.53 ಕೋಟಿ.
7	ಸಿಬ್ಬಂದಿ/ಕಾರ್ಮಿಕರ ಸಂಖ್ಯೆ	19ನೇ ಡಿಸೆಂಬರ್ 2023ರಂತೆ, ಕಾರ್ಪೋರೇಟ್ ಸಾಲಗಾರರು ಅಂದಾಜು 796 ಸಿಬ್ಬಂದಿ/ಕಾರ್ಮಿಕರನ್ನು ಹೊಂದಿದ್ದಾರೆ.
8	ಕೊನೆಯದಾಗಿ ಲಭ್ಯವಿರುವ ಕಳೆದೆರಡು ವರ್ಷಗಳ ಆರ್ಥಿಕ ವಿವರಗಳು ಸಹಿತ (ವೇಳಾಪಟ್ಟಿ ಸಹಿತ) ಸಾಲ ಪಡೆದುಕೊಂಡಿರುವವರ ಪಟ್ಟಿಯು ಈ ಯುಆರ್‌ಎಲ್‌ನಲ್ಲಿ ಲಭ್ಯವಿದೆ:	ದಿವಾಳಿತನ ಮತ್ತು ಪರಿಹಾರ ಆಸಾಧ್ಯ ಭಾರತೀಯ ಮಂಡಳಿ (ಕಾರ್ಪೋರೇಟ್ ವ್ಯಕ್ತಿಗಳ ದಿವಾಳಿತನ ಪರಿಹಾರ ಪ್ರಕ್ರಿಯೆ) ನಿಯಂತ್ರಣಗಳು 2016ರ ನಿಯಂತ್ರಣ 36ಎ ಮತ್ತು ನಿಯಂತ್ರಣ 36ಬಿ(6ಎ) ಅನ್ವಯ ಕಾರ್ಪೋರೇಟ್ ಸಾಲಗಾರರ ಸ್ಥಿರಾಸ್ತಿಗಳ ಸಮುಚ್ಚ ಬಗ್ಗೆ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಆಹ್ವಾನಿಸಲಾಗಿದೆ. https://felindia.in/cirp/EOI.html ನಲ್ಲಿ ಪ್ರಕಟಿಸಿರುವ ಆಸಕ್ತಿ ವ್ಯಕ್ತಪಡಿಸುವಿಕೆ ಆಹ್ವಾನದ ಜತೆಗೆ ಕಾರ್ಪೋರೇಟ್ ಸಾಲಗಾರರ ಸ್ಥಿರಾಸ್ತಿಗಳ ಸಮೂಹದ ವಿವರ ಮತ್ತು ಮುಂದುವರಿದ ಪ್ರಕ್ರಿಯೆಗೆ ಸಂಬಂಧಿಸಿದ ದಿನಾಂಕಗಳನ್ನು ಗಮನಿಸುವುದು. ಕೊನೆಯಲ್ಲಿ ಲಭ್ಯವಿರುವ ಆರ್ಥಿಕ ವಿವರಗಳ ಮಾಹಿತಿಯು https://felindia.in/cirp/investor.html ನಲ್ಲಿ ಲಭ್ಯವಿದೆ. ಸಾಲ ಪಡೆದಿರುವವರ ಪಟ್ಟಿಯು https://felindia.in/cirp/claims.html ನಲ್ಲಿ ಲಭ್ಯವಿದೆ.
9	ನಿಯಮಾವಳಿಗಳ ಪರಿಚ್ಛೇದ 25(2)(ಎಚ್) ನಡಿಯಲ್ಲಿ ಪರಿಹಾರ ಅರ್ಜಿದಾರರ ಅರ್ಹತೆಯ ಈ ಯುಆರ್‌ಎಲ್‌ನಲ್ಲಿ ಲಭ್ಯವಿದೆ:	ದಿವಾಳಿತನ ಮತ್ತು ಪರಿಹಾರ ಆಸಾಧ್ಯ ನಿಯಮಾವಳಿಗಳು, 2016ರ ಪರಿಚ್ಛೇದ 29ಎ ಅಡಿ ಪರಿಹಾರ ಅರ್ಜಿದಾರರು ಅರ್ಹತೆ ಹೊಂದಿರಬೇಕು. ಆಸಕ್ತಿ ವ್ಯಕ್ತಪಡಿಸುವಿಕೆಯ ಆಹ್ವಾನದ ವಿಸ್ತೃತ ಮಾಹಿತಿಯು https://felindia.in/cirp/EOI.html ನಲ್ಲಿ ಲಭ್ಯವಿದೆ.
10	ಆಸಕ್ತಿ ವ್ಯಕ್ತಪಡಿಸುವಿಕೆಯ ಸಲ್ಲಿಕೆಯ ಕೊನೆಯ ದಿನ	16ನೇ ಜನವರಿ 2024
11	ಭಾವಿ ಪರಿಹಾರ ಅರ್ಜಿದಾರರ ಪ್ರಾಥಮಿಕ ಪಟ್ಟಿ ಬಿಡುಗಡೆ ದಿನಾಂಕ	21ನೇ ಜನವರಿ 2024
12	ಪ್ರಾಥಮಿಕ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ	26ನೇ ಜನವರಿ 2024
13	ಭಾವಿ ಪರಿಹಾರ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಿಸುವ ದಿನಾಂಕ	28ನೇ ಜನವರಿ 2024
14	ಮಾಹಿತಿ ಜ್ಞಾಪಕಪತ್ರ, ಮೌಲ್ಯಾಪನ ಅನುಪಾತ ಮತ್ತು ಪರಿಹಾರ ಯೋಜನೆಗಳ ಮಸವಿಯನ್ನು ಭಾವಿ ಪರಿಹಾರ ಅರ್ಜಿದಾರರಿಗೆ ಕೊಡುವ ದಿನಾಂಕ	28ನೇ ಜನವರಿ 2024
15	ಪರಿಹಾರ ಯೋಜನೆಗಳ ಸಲ್ಲಿಕೆಗೆ ಕೊನೆಯ ದಿನ	27ನೇ ಫೆಬ್ರವರಿ 2024
16	ಆಸಕ್ತಿ ವ್ಯಕ್ತಪಡಿಸುವಿಕೆ ಸಲ್ಲಿಸಬೇಕಾದ ಇ-ಮೇಲ್ ಐಡಿ	irp.future@gmail.com

ಸಹಿ/-
ಅವಿಲ್ ಮೆನೆಂಜಸ್
ಫ್ಯೂಚರ್ ಎಂಟರ್‌ಪ್ರೈಸಸ್ ಅಮಿಟೆಡ್ನ ಪರಿಹಾರ ವೃತ್ತಿಪರ
ಕಾರ್ಯದ ಅಧಿಕೃತ ನೇಮಕಾತಿಯು 27ನೇ ನವೆಂಬರ್ 2024ರವರೆಗೆ ಮಾನ್ಯತೆ ಹೊಂದಿದೆ
ನೋಂದಣಿ ಸಂ. IBBI/IPA-001/IP-P00017/2016-17/10041
ನೋಂದಾಯಿತ ವಿಳಾಸ: 106, 1ನೇ ಮಹಡಿ, ಕನಕಿಯಾ ಆರ್ಟಿಯಂ 2, ಕ್ರಾಸ್ ರೋಡ್ ಎ, ಕೋರ್ಟ್‌ಯಾರ್ಡ್ ಮಾರಿಯಟ್ ಹಿಂಭಾಗ, ಚಕಲ, ಅಂಧೇರಿ (ಪೂ), ಮುಂಬೈ-400 093
ಇ-ಮೇಲ್: avil@caavil.com, irp.future@gmail.com
26ನೇ ಡಿಸೆಂಬರ್ 2023, ಮುಂಬೈ

ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ | 30 ಮಂದಿಗೆ ಐಸಿಯುನಲ್ಲಿ ನಿಗಾ | ವೃದ್ಧೆ ಸಾವು ಮೂಡಿಸಿದ ಗೊಂದಲ

ಪ್ರಸಾದ ಸೇವಿಸಿದ 250ಕ್ಕೂ ಹೆಚ್ಚು ಮಂದಿ ಅಸ್ವಸ್ಥ

■ ವಿಜಯವಾಣಿ ಸುದ್ದಿಜಾಲ ಹೊಸಕೋಟೆ

ವೈಕುಂಠ ಏಕಾದಶಿ ಹಾಗೂ ಹನುಮ ವ್ರತಾಚರಣೆ ವೇಳೆ ಶನಿವಾರ ಮತ್ತು ಭಾನುವಾರ ದೇಗುಲಗಳಲ್ಲಿ ಪ್ರಸಾದ ಸೇವಿಸಿದ ಬಳಿಕ ಅಸ್ವಸ್ಥಗೊಂಡ 250ಕ್ಕೂ ಹೆಚ್ಚು ಮಂದಿ ಪೈಕಿ ಓರ್ವ ವೃದ್ಧೆ ಸೋಮವಾರ ಮಧ್ಯಾಹ್ನ ಮೃತಪಟ್ಟಿದ್ದಾರೆ. ಉಳಿದವರು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, 30ಕ್ಕೂ ಹೆಚ್ಚು ಮಂದಿ ತೀವ್ರ ನಿಗಾ ಘಟಕದಲ್ಲಿದ್ದಾರೆ.

ಹೊಸಕೋಟೆಯ ಸಿದ್ದಗಂಗಮ್ಮ(63) ಮೃತಪಟ್ಟವರು. ಆದರೆ ಈಕೆಗೆ ಬ್ಯಾಕ್ಟೀರಿಯಾ ಸೋಂಕು ತಗಲಿರುವುದು ವೈದ್ಯಕೀಯ ಪರೀಕ್ಷೆಯಲ್ಲಿ ಕಂಡುಬಂದಿದೆ ಎನ್ನಲಾಗಿದ್ದು, ಪ್ರಸಾದದಲ್ಲಿನ ವಿಷಕಾರಿ ವಸ್ತುವಿನಿಂದ ಮೃತಪಟ್ಟಿದ್ದಾರೆಯೇ ಎನ್ನುವುದು ಖಚಿತವಾಗಿಲ್ಲ. ಆದರೆ ದೇಗುಲದ ಪ್ರಸಾದ ಸೇವಿಸಿ ಅಸ್ವಸ್ಥಗೊಂಡ ಭಕ್ತರೊಂದಿಗೆ ಸಿದ್ದಗಂಗಮ್ಮ ಸಹ ಚಿಕಿತ್ಸೆಗೆ ದಾಖಲಾಗಿರುವುದರಿಂದ ಪ್ರಕರಣದಲ್ಲಿ ಗೊಂದಲ ಕಂಡುಬಂದಿದೆ.

ಶರತ್ ಬಚ್ಚೇಗೌಡ ತುರ್ತು ಸಭೆ: ಪ್ರಕರಣ ಹಿನ್ನೆಲೆಯಲ್ಲಿ ಶಾಸಕ ಶರತ್‌ಬಚ್ಚೇಗೌಡ ತಾಲೂಕಿನ ಸರ್ಕಾರಿ ಅಧಿಕಾರಿಗಳ ಸಭೆ ಕರೆದು ಚರ್ಚಿಸಿದ್ದಾರೆ. ಹೆಚ್ಚಿನ ಅನಾಹುತವಾಗದಂತೆ ತಡೆಗಟ್ಟಲು ತಾಲೂಕು ಆಡಳಿತ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಪ್ರಕರಣದ ಸತ್ಯಾಸತ್ಯತೆ ಬಗ್ಗೆ ತನಿಖೆ ನಡೆಸುವಂತೆ ಪೊಲೀಸರಿಗೆ ಸೂಚಿಸಿದ್ದಾರೆ.

ತಿನ್ನದಿರುವವರಿಗೂ ಸಮಸ್ಯೆ

ದೇವಾಲಯದಲ್ಲಿ ಎರಡೂ ದಿನ ಸಾವಿರಾರು ಭಕ್ತರು ಪ್ರಸಾದ ಸೇವಿಸಿದ್ದಾರೆ. ಅದರಲ್ಲಿ ಬಹುತೇಕರು ಉಪವಾಸ ಕಾರಣ ಪ್ರಸಾದ ಸ್ವೀಕರಿಸಿಲ್ಲ. ಆದರೆ ಪ್ರಸಾದ ಸೇವಿಸಿದ ಹಾಗೂ ಸೇವಿಸದೆ ಇದ್ದವರಿಗೂ ವಾಂತಿ ಭೇದಿ ಕಾಣಿಸಿಕೊಂಡಿದೆ. ಅಲ್ಲದೆ ಕೆಲವರು ದೇವಸ್ಥಾನಕ್ಕೆ ಹೋಗಿಲ್ಲ. ಅವರಲ್ಲೂ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿದ್ದು ಪ್ರಕರಣ ಕಗ್ಗಂಟಾಗಿದೆ.

ವಿಜಯವಾಣಿ ಚಿತ್ರ

ಹೊಸಕೋಟೆಯ ಸಿಲಿಕಾನ್ ಆಸ್ಪತ್ರೆಗೆ ಭೇಟಿ ನೀಡಿ ಶಾಸಕ ಶರತ್ ಬಚ್ಚೇಗೌಡ ರೋಗಿಗಳ ಯೋಗ ಕ್ಷೇಮ ವಿಚಾರಿಸಿದರು.

ಸಾವಿರಾರು ಭಕ್ತರಿಗೆ ಪ್ರಸಾದ ವಿನಿಯೋಗ

ಶನಿವಾರ ವೈಕುಂಠ ಏಕಾದಶಿ ಪ್ರಯುಕ್ತ ನಗರದ ಮಾರ್ಕೆಟ್ ರಸ್ತೆಯಲ್ಲಿರುವ ಶ್ರೀವೆಂಕಟರಮಣಸ್ವಾಮಿ ದೇವಾಲಯ, ಗಾಣಿಗರ ಪೇಟೆಯ ಲಕ್ಷ್ಮಿನಾರಾಯಣ ದೇವಾಲಯದಲ್ಲಿ 15 ಸಾವಿರಕ್ಕೂ ಹೆಚ್ಚು ಭಕ್ತರು ಆಗಮಿಸಿದ್ದರು. ಭಾನುವಾರ ಹನುಮ ವ್ರತಾಚರಣೆ ಹಿನ್ನೆಲೆಯಲ್ಲಿ ಪಾರ್ವತಿ ಪುರದಲ್ಲಿರುವ ಮೂಡಲಬಾಗಿಲು ಆಂಜನೇಯ ದೇವಾಲಯ ಹಾಗೂ ಕೋಟೆಯಲ್ಲಿರುವ ಖುಲ್ಲೆ ಆಂಜನೇಯ ದೇವಾಲಯಗಳಲ್ಲೂ ಭಕ್ತರ ದಂಡೇ ನೆರೆದಿತ್ತು. ಈ ದೇಗುಲಗಳಲ್ಲಿ ಎಂದಿನಂತೆ ಪ್ರಸಾದ ವಿನಿಯೋಗ ನಡೆದಿತ್ತು. ಪ್ರಸಾದ ವಿತರಣೆಯಲ್ಲಿ ಲಡ್ಡು ಪ್ರಸಾದ, ಅವಲಕ್ಕಿ ಚಿತ್ರಾನ್ನ, ಪುಳಿಯೋಗರೆ ಹಾಗೂ ವಿವಿಧ ಸಿಹಿ ತಿಂಡಿಗಳಿದ್ದವು. ಪ್ರಸಾದ ಸೇವನೆ ಬಳಿಕ ಬಹಳಷ್ಟು ಮಂದಿಗೆ ವಾಂತಿ ಭೇದಿ ಕಾಣಿಸಿಕೊಂಡು ಅಸ್ವಸ್ಥಗೊಂಡಿದ್ದರು.

ನಗರದ ಆರು ಆಸ್ಪತ್ರೆಗಳಲ್ಲಿ ಚಿಕಿತ್ಸೆ

ನಗರದ ಎಂವಿಜೆ ಆಸ್ಪತ್ರೆ, ಸಾರ್ವಜನಿಕ ಸರ್ಕಾರಿ ಆಸ್ಪತ್ರೆ, ಶ್ರೀನಿವಾಸ ಆಸ್ಪತ್ರೆ, ಸಿಲಿಕಾನ್ ಸಿಟಿ ಆಸ್ಪತ್ರೆ, ಮಿಷನ್ ಆಸ್ಪತ್ರೆ, ಕೆಂಪಣ್ಣ ಆಸ್ಪತ್ರೆಗಳಲ್ಲಿ 250ಕ್ಕೂ ಹೆಚ್ಚು ಮಂದಿ ದಾಖಲಾಗಿದ್ದಾರೆ. ಭಾನುವಾರ ರಾತ್ರಿ ಸಹ ಮತ್ತಷ್ಟು ಮಂದಿ ಚಿಕಿತ್ಸೆಗೆ ದಾಖಲಾಗಿದ್ದಾರೆ.

ಆರೋಗ್ಯ ಉಲ್ಬಣಗೊಳ್ಳುವ ಮುಂಜಾಗ್ರತಾ ಕ್ರಮವಾಗಿ ಎಲ್ಲ ಆಸ್ಪತ್ರೆಗಳಲ್ಲಿ ಹೆಚ್ಚುವರಿ ಬೆಡ್ ವ್ಯವಸ್ಥೆ ಮಾಡಲಾಗಿದೆ. ವಿವಿಧ ಆಸ್ಪತ್ರೆಗಳ ಮುಖ್ಯಸ್ಥರೊಂದಿಗೆ ಚರ್ಚೆ ನಡೆಸಿದ್ದು, ಹೆಚ್ಚುವರಿ ಬೆಡ್ ವ್ಯವಸ್ಥೆ ಬಗ್ಗೆ ಭರವಸೆ ನೀಡಿದ್ದಾರೆ. ಹೆಚ್ಚುವರಿಯಾಗಿ 6ಕ್ಕೂ ಹೆಚ್ಚು ಆಂಬುಲೆನ್ಸ್‌ಗಳನ್ನು ಸಜ್ಜುಗೊಳಿಸಲಾಗಿದೆ. ಈ ಪ್ರಕರಣದಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾಗಿರುವವರಿಗೂ ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕದ ಯೋಜನೆಯಡಿ ಉಚಿತ ಚಿಕಿತ್ಸೆ ನೀಡಲಾಗುವುದು.

| ಶರತ್ ಬಚ್ಚೇಗೌಡ ಶಾಸಕ

ಪ್ರಸಾದ ಸೇವನೆ ಪ್ರಕರಣದಲ್ಲಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ ವೃದ್ಧೆ ಮೃತಪಟ್ಟಿದ್ದಾರೆ. ಮೃತರಿಗೆ ಇನ್ನಿತರ ಆರೋಗ್ಯ ಸಮಸ್ಯೆ ಇದ್ದ ಬಗ್ಗೆ ವೈದ್ಯಕೀಯ ಪರೀಕ್ಷೆಯಲ್ಲಿ ತಿಳಿದುಬಂದಿದೆ. ದೇಗುಲದಲ್ಲಿ ನೀಡಿದ ಲಡ್ಡು ಪ್ರಸಾದ ಹಾಗೂ ಅವಲಕ್ಕಿ ಚಿತ್ರಾನ್ನ ಸೇವಿಸಿರುವುದು ಪರೀಕ್ಷೆಯಲ್ಲಿ ದೃಢಪಟ್ಟಿದೆ. 250ಕ್ಕೂ ಹೆಚ್ಚು ಮಂದಿಗೆ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ. ಎಲ್ಲರ ಆರೋಗ್ಯ ಸ್ಥಿರವಾಗಿದೆ.

ಶಾಸಕ ಶರತ್ ಬಚ್ಚೇಗೌಡ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

| ಡಾ.ಎನ್.ಶಿವಶಂಕರ್ ಜಿಲ್ಲಾಧಿಕಾರಿ

ಸಿದ್ದಗಂಗಮ್ಮ ಪುತ್ರಿಯೂ ದಾಖಲು

ಆಸ್ಪತ್ರೆಗೆ ದಾಖಲಾಗಿದ್ದ ಸಿದ್ದಗಂಗಮ್ಮ ಅವರ ಆರೈಕೆ ಮಾಡಲು ಬಂದಿದ್ದ ಪುತ್ರಿ ಮಮತಾ, ತಾಯಿ ಸಾವಿನ ನಂತರ ಆರೋಗ್ಯ ಸಮಸ್ಯೆ ತೀವ್ರವಾಗಿ ಅದೇ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತಿದ್ದಾರೆ. ಆದರೆ ಅವರು, ಕಳೆದೆರಡು ದಿನದಿಂದ ಯಾವುದೇ ದೇವಸ್ಥಾಕ್ಕೆ ಹೋಗಿಲ್ಲ ಮತ್ತು ಯಾವುದೇ ಪ್ರಸಾದ ಸೇವನೆ ಮಾಡಿಲ್ಲ ಎನ್ನಲಾಗಿದೆ.

ಡಿವೈಎಸ್‌ಪಿ ನೇತೃತ್ವದಲ್ಲಿ ತನಿಖೆ

ವಾಂತಿ-ಭೇದಿ ಪ್ರಕರಣ ಸಂಬಂಧ ಡಿವೈಎಸ್‌ಪಿ ನೇತೃತ್ವದಲ್ಲಿ ತಂಡ ರಚಿಸಿ ತನಿಖೆ ಕೈಗೊಂಡಿರುವುದಾಗಿ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ